# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\9465\2017\ಉನಿವಿ-4

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 21/03/2019

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ ಮೈಸೂರು ಜಿಲ್ಲೆ ಪಿರಿಯಾಪಟ್ಟಣ, ಕಾರ್ಯ ಮತ್ತು ಪಾಲನಾ ಉಪವಿಭಾಗ ಚೆಸ್ಕಾಂನ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿ) ಶ್ರೀ.ಅಬ್ದುಲ್ ವಾಜಿದ್ ಖಾನ್ ರವರ ಕರ್ತವ್ಯ ಲೋಪದ ಬಗ್ಗೆ.

**********

ಮೈಸೂರು ಜಿಲ್ಲೆ ಪಿರಿಯಾಪಟ್ಟಣ ಪೇಟೆ ಎಸ್.ಜಿ.ರಸ್ತೆ #598ರ ನಿವಾಸಿಯಾದ ಶ್ರೀ.ಟಿ.ಜಿ.ಆನಂದ ಬಿನ್ ಜವರಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಪಿರಿಯಾಪಟ್ಟಣ, ಕಾರ್ಯ ಮತ್ತು ಪಾಲನಾ ಉಪವಿಭಾಗ ಚೆಸ್ಕಾಂನ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿ) ಶ್ರೀ.ಅಬ್ದುಲ್ ವಾಜಿದ್ ಖಾನ್ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತಮ್ಮ ಮನೆಗೆ ವಿದ್ಯುತ್ ಸಂಪರ್ಕವಿರುವ ವಿದ್ಯುತ್ ಕಂಬದಿಂದ ಮನೆಗೆ ಎಳೆದಿರುವ ವಿದ್ಯುತ್ ತಂತಿಯನ್ನು ಕೇಬಲ್ ಟಿವಿ ರವರು ಕಿತ್ತು ಹಾಕಿ ಅವೈಜ್ಞಾನಿಕವಾಗಿ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗುವ ರೀತಿ ಮರು ಜೋಡಣೆ ಮಾಡಿದ ಬಗ್ಗೆ ಎದುರುದಾರರಿಗೆ ನೀಡಿದ ದೂರಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ, ಕರ್ತವ್ಯ ನಿರ್ಲಕ್ಷ್ಯತೆ ತೋರಿದ್ದಾರೆ ಹಾಗೂ ಸರ್ಕಾರಿ ಬೊಕ್ಕಸಕ್ಕೆ ನಷ್ಟಪಡಿಸಿದ್ದಾರೆಂದು ಹೇಳಿದ್ದಾರೆ.

3. ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಪಿರಿಯಾಪಟ್ಟಣ ಟೌನ್‌ನಲ್ಲಿ ವಿದ್ಯುತ್ ಕಂಬಗಳ ಮೂಲಕ ಡಿಶ್ ಕೇಬಲ್‌ಗಳನ್ನು ಅಳವಡಿಸಲು ಕೇಬಲ್ ಆಪರೇಟರ್‌ಗಳಿಗೆ ಅನುಮತಿ ನೀಡಿರುವ ಮಾನದಂಡಗಳ ಮಾಹಿತಿ ಕೋರಿ, ದೂರುದಾರರು ಸಲ್ಲಿಸಿದ ಅರ್ಜಿಯಲ್ಲಿ ಸದರಿಯವರಿಗೆ ಮಾಹಿತಿ ನೀಡಿದ್ದರೂ, ಮಾಹಿತಿ ತಲುಪಿಲ್ಲವೆಂದು ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಯನ್ನು ಸಲ್ಲಿಸಿದ್ದರು. ಮೇಲ್ಮನವಿ ಪ್ರಾಧಿಕಾರದ ಆದೇಶದಂತೆಯೂ ದೂರುದಾರರಿಗೆ ಪುನಃ ಮಾಹಿತಿ ನೀಡಿದೆ. ವಿದ್ಯುಚ್ಛಕ್ತಿ ಗ್ರಾಹಕರಿಗೆ ಸಮಸ್ಯೆಯಾಗದಂತೆ ವಿದ್ಯುತ್ ಕಂಬಗಳ ಮೇಲೆ ಕೇಬಲ್ ಟಿವಿ ನೆಟ್‌ವರ್ಕಿನ ಕೇಬಲ್‌ಗಳನ್ನು ಅಳವಡಿಸಲು ಕರ್ನಾಟಕ ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಅವಕಾಶ ನೀಡಿದೆ. ಅಂತೆಯೇ, ಪಿರಿಯಾಪಟ್ಟಣ ಉಪ ವಿಭಾಗದ ವ್ಯಾಪ್ತಿಯಲ್ಲಿ ಕೇಬಲ್ ಟಿವಿ ನೆಟ್‌ವರ್ಕಿನ ಕೇಬಲ್‌ಗಳನ್ನು ಒಟ್ಟು 3392 ಕಂಬಗಳಲ್ಲಿ ಅಳವಡಿಸಲು ಉಪಯೋಗಿಸಿದೆ. ಕೇಬಲ್‌ಗಳನ್ನು ಅಳವಡಿಸುವಾಗ ಕೇಬಲ್ ನಿರ್ವಾಹಕರು ಸೆಸ್ಕ್ ಅಧಿಕಾರಿಗಳಿಂದ ಲೈನ್ ಕ್ಲಿಯರ್ ತೆಗೆದುಕೊಂಡು, ಸಮ್ಮತಿ ಪಡೆದು ಮೆಸೆಂಜರ್ ವೈರ್‌ನ ಸಪೋರ್ಟ್‌ನಿಂದ ಅಳವಡಿಸುತ್ತಿದ್ದಾರೆ. ವಿದ್ಯುತ್ ಕೇಬಲ್‌ಗೂ ಮತ್ತು ಟಿವಿ ನೆಟ್‌ವರ್ಕಿನ ಕೇಬಲ್‌ಗೂ ಕನಿಷ್ಠ 0.5 ಮೀಟರ್ ಅಂತರ ಇದೆ. ಜಂಕ್ಷನ್ ಬಾಕ್ಸ್‌ಗಳನ್ನು ಉಪಯೋಗಿಸಿ, ತಾಂತ್ರಿಕವಾಗಿ ಯಾವ ಸಮಸ್ಯೆಯೂ ಉಂಟಾಗದಂತೆ ನೋಡಿಕೊಳ್ಳಲು ಅವಕಾಶ ಇರುವುದರಿಂದ ವಿದ್ಯುಚ್ಛಕ್ತಿ ಗ್ರಾಹಕರಿಗೆ ಯಾವ ಸಮಸ್ಯೆಯೂ ಉಂಟಾಗುವುದಿಲ್ಲ. ಕೇಬಲ್‌ನಿಂದ ಸಮಸ್ಯೆಯಾಗಿದೆಯೆಂದು ಯಾವ ಗ್ರಾಹಕರು ದೂರು ಸಲ್ಲಿಸಿಲ್ಲ. ಕಾರಣ, ದೂರುದಾರರ ದೂರಿನಲ್ಲಿ ಯಾವುದೇ ಹುರುಳಿಲ್ಲ ಎಂದು ಹೇಳಿದ್ದಾರೆ.

4. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

1) ವಿದ್ಯುಚ್ಛಕ್ತಿ ಕಾಯಿದೆ, 2003ರ ಕಲಂ 51 ಈ ಕೆಳಗಿನಂತಿದೆ –

**Section 51. Other businesses of distribution licensees**: A distribution licensee may, with prior intimation to the Appropriate Commission, engage in any other business for optimum utilisation of its assets: Provided that a proportion of the revenues derived from such business shall, as may be specified by the concerned State Commission, be utilised for reducing its charges for wheeling : Provided further that the distribution licensee shall maintain separate accounts for each such business undertaking to ensure that distribution business neither subsidises in any way such business undertaking nor encumbers its distribution assets in any way to support such business. Provided also that nothing contained in this section shall apply to a local authority engaged, before the commencement of this Act, in the business of distribution of electricity.

**Section 53. Provisions relating to safety and electricity supply**: The Authority may in consultation with the State Government, specify suitable measures for – (a)**protecting the public** (including the persons engaged in the generation, transmission or distribution or trading) from dangers arising from the generation, transmission or distribution or trading of electricity, or use of electricity supplied or installation, maintenance or use of **any electric line** or electrical plant;

(b) **eliminating or reducing the risks of personal injury to any person, or damage to property of any person or interference with use of such property**;
(c) prohibiting the supply or transmission of electricity except by means of a system which conforms to the specification as may be specified;
(d) giving notice in the specified form to the Appropriate Commission and the Electrical Inspector, of accidents and failures of supplies or transmissions of electricity;
(e) keeping by a generating company or licensee the maps, plans and sections relating to supply or transmission of electricity;
(f) inspection of maps, plans and sections by any person authorised by it or by Electrical Inspector or by any person on payment of specified fee;
(g) specifying action to be taken in relation to any electric line or electrical plant, or any electrical appliance under the control of a consumer for the purpose of eliminating or reducing the risk of personal injury or damage to property or interference with its use.

Indian Electricity Rules, 1956 ರ ನಿಯಮ 86, ಈ ಕೆಳಗಿನಂತಿದೆ

**86. Conditions to apply where telecommunication lines and power lines are carried on same supports**– (1) Every overhead **telecommunication line erected on supports carrying a power line** shall consist of conductors each having a breaking strength of not less than 270 kg.

(2) Every telephone used on a telecommunication line erected on supports carrying a power line **shall be suitably guarded** against lightning and shall be protected by cutouts.

(3) **Where a telecommunication line is erected** on supports carrying a high or extra-high voltage power line arrangement shall be made to safeguard any person using the telephone against **injury resulting from contact**, leakage or induction between such **power and telecommunication lines.**

2) ಮುಂದುವರೆದು, ವ್ಯವಸ್ಥಾಪಕ ನಿರ್ದೇಶಕರು (ತಾಂತ್ರಿಕ), ಚೆಸ್ಕಾಂ, ಮೈಸೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ–ಪ್ರವ್ಯ(ತಾ)\ಉಪ್ರವ್ಯ(ತಾ)–4\ಸಿ1–2003\2016–17\ಸಿವೈಎಸ್–1135 ದಿನಾಂಕ:13/01/17 ರಲ್ಲಿ ಚೆಸ್ಕಾಂ ವ್ಯಾಪ್ತಿಯಲ್ಲಿರುವ ವಿದ್ಯುತ್ ಕಂಬಗಳ ಮುಖಾಂತರ ಅಳವಡಿಸಿರುವ ಡಿಶ್ ಕೇಬಲ್‌ಗಳಿಗೆ ಬಾಡಿಗೆ ಶುಲ್ಕ ವಸೂಲಿ ಹಾಗೂ ಸುರಕ್ಷತಾ ಕ್ರಮಗಳ ಕುರಿತು ಹೇಳಿದೆ;

3) ಎದುರುದಾರರ ಆಕ್ಷೇಪಣೆಯ ಅನ್ವಯ ಪಿರಿಯಾಪಟ್ಟಣ ಟೌನ್ ವ್ಯಾಪ್ತಿಯಲ್ಲಿ ಒಟ್ಟು 3392 ವಿದ್ಯುತ್ ಕಂಬಗಳನ್ನು ಟಿವಿ ಕೇಬಲ್ ಎಳೆಯಲು ಉಪಯೋಗಿಸಿಕೊಂಡಿರುವುದು ಕಂಡು ಬಂದಿದೆ,

1. ಮೇಲೆ ಹೇಳಿದ ಅಧಿಕೃತ ಜ್ಞಾಪನದನ್ವಯ ಸದರಿ ವಿದ್ಯುತ್ ಕಂಬಗಳಲ್ಲಿ ಅಳವಡಿಸಿದ ವಿದ್ಯುತ್ ಮಾರ್ಗಕ್ಕೂ ಮತ್ತು ಟಿವಿ ಕೇಬಲ್‌ಗೂ ಕನಿಷ್ಟ ಅಂತರ ಇದೆಯೇ ಮತ್ತು ಸಾರ್ವಜನಿಕರ ಆಸ್ತಿ–ಪಾಸ್ತಿ ಮತ್ತು ಜೀವಕ್ಕೆ ತೊಂದರೆ ಉಂಟಾಗದಂತೆ ಮುನ್ನೆಚ್ಚರಿಕೆ ಕ್ರಮವನ್ನು ವಹಿಸಿದ ಬಗ್ಗೆ ಹಾಗೂ ಕಾಲಕಾಲಕ್ಕೆ ಸ್ಥಳ ಪರಿಶೀಲನೆ ಮಾಡಿದ ಬಗ್ಗೆ ದಾಖಲೆಗಳಿಲ್ಲ;
2. ಮೇಲೆ ಹೇಳಿದ ಅಧಿಕೃತ ಜ್ಞಾಪನದನ್ವಯ ಇಲಾಖೆಯ ವಿದ್ಯುತ್ ಕಂಬಗಳಲ್ಲಿ ಟಿವಿ ಕೇಬಲ್‌ಗಳನ್ನು ಅಳವಡಿಸಿದ ಬಗ್ಗೆ ಕೇಬಲ್ ಟಿವಿ ಆಪರೇಟರ್ \ ಏಜೆನ್ಸಿ ಗಳಿಂದ ಕರಾರು

ಮಾಡಿಕೊಂಡ ದಾಖಲೆ ಮತ್ತು ವಿದ್ಯುತ್ ಕಂಬಗಳನ್ನು ಬಳಸಿದ ಬಗ್ಗೆ ಸದರಿಯವರುಗಳಿಂದ ಭದ್ರತಾ ಠೇವಣಿ ಮತ್ತು ಬಾಡಿಗೆ ಪಡೆದ ಬಗ್ಗೆ ದಾಖಲೆಯಿಲ್ಲ;

3. ಟಿವಿ ಕೇಬಲ್‌ಗಳನ್ನು ಹಾಕಿರುವ ಕಂಬ ಮತ್ತು ವಿದ್ಯುತ್ ಮಾರ್ಗಗಳಲ್ಲಿ ಅಳವಡಿಸಿರುವ ಟಿವಿ ಕೇಬಲ್‌ಗಳನ್ನು ತಪಾಸಣೆ ನಡೆಸುವ ಬಗ್ಗೆ ಸಿಬ್ಬಂದಿಗಳಿಂದ ಸ್ಥಳಕ್ಕೆ ಅನಿರೀಕ್ಷಿತ ಭೇಟಿ ಮಾಡಿದ ಬಗ್ಗೆ ದಾಖಲೆಗಳಿಲ್ಲ;
4. ಟಿವಿ ಕೇಬಲ್‌ಗಳನ್ನು ಅಳವಡಿಸುವಾಗ ಇಲಾಖೆಯ ಆಸ್ತಿ–ಪಾಸ್ತಿಗೆ ನಷ್ಟ ಉಂಟಾಗಿದೆಯೇ ಎಂದು ಪರಿಶೀಲಿಸಿದ ಬಗ್ಗೆ ದಾಖಲೆಗಳಿಲ್ಲ;
5. ಇಂಡಿಯನ್ ಎಲೆಕ್ಟ್ರಿಸಿಟಿ ಕಾಯಿದೆ, 2003ರ ಕಲಂ 51 ಮತ್ತು ಇಂಡಿಯನ್ ಎಲೆಕ್ಟ್ರಿಸಿಟಿ ರೂಲ್ಸ್, 1956ರ ನಿಯಮ 86 ಹಾಗೂ ವ್ಯವಸ್ಥಾಪಕ ನಿರ್ದೇಶಕರು (ತಾಂತ್ರಿಕ), ಚೆಸ್ಕಾಂ, ಮೈಸೂರು ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ–ಪ್ರವ್ಯ(ತಾ)\ಉಪ್ರವ್ಯ(ತಾ)–4\ಸಿ1–2003\2016–17\ಸಿವೈಎಸ್–1135 ದಿನಾಂಕ:13/01/17ರನ್ವಯ ಎದುರುದಾರರು ಮುನ್ನೆಚ್ಚರಿಕೆ ಕ್ರಮ ವಹಿಸದೇ ಇರುವುದು ಮತ್ತು ವಾರ್ಷಿಕ ಬಾಡಿಗೆ ಶುಲ್ಕ ವಸೂಲಿ ಮಾಡದೇ ಇರುವುದು ಕಂಡು ಬಂದಿದೆ.

4) ಎದುರುದಾರರು ದಿನಾಂಕ:04/10/16 ರಿಂದ ಚೆಸ್ಕಾಂ ಪಿರಿಯಾಪಟ್ಟಣ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿ) ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಮೇಲೆ ಹೇಳಿದ ಅಂಶಗಳನ್ನು ಪಾಲಿಸದೇ ಸದರಿಯವರು ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿದೆ.

5. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

6. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

7. ಅದಲ್ಲದೆ, ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ (ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1988ರ ನಿಯಮಗಳ ಅಡಿಯಲ್ಲಿ

UPLOK-1/DE/[illegible] 945/IT



ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ನೌಕರರ (ವರ್ಗೀಕರಣ, ಶಿಸ್ತು, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1988ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸ ಬೇಕೆಂದು ಕೋರಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

N. Anand 21/3

(ನ್ಯಾಯಮೂರ್ತಿ ಎನ್.ಆನಂದ)
ಉಪಲೋಕಾಯುಕ್ತ,
ಕರ್ನಾಟಕ ರಾಜ್ಯ.

21/3